# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

Superintending Engineer(Ele)
O & M Circle, Keshwapur, Hubballi-23
E-mail ID: seehbl.hescom@gmail.com



Corporate Identity Number (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:255/2021**

**ವೇದಿಕೆಯ ಸದಸ್ಯರು:**

ಶ್ರೀ **ಎಮ್. ಆರ್. ಶಾನಭಾಗ,** ಅಧೀಕ್ಷಕ ಇಂಜಿನೀಯರ(ವಿ)ಕಾ ಮತ್ತು ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರಮೇಶ ಟಿ,** ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹೆಸ್ಕಾಂ, ಧಾರವಾಡ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

ಶ್ರೀ ಕಾಶಿನಾಥ ಆರ್ ಚಾಟ್ನಿ,
CTS No. 2403/A, ಲಕ್ಷ್ಮೀ ಬಾಲಕೃಷ್ಣ ಸ್ಕೊಯರ್,
ಸ್ಟೇಷನ್ ರೋಡ, ಹುಬ್ಬಳ್ಳಿ
(R R No : HT117) ..............**ದೂರುದಾರರು.**
AC.ID:51226420000
C/o ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ, ಕೇಶ್ವಾಪೂರ, ಹುಬ್ಬಳ್ಳಿ.

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪ ವಿಭಾಗ-2,
ಹೆಸ್ಕಾಂ, ಹುಬ್ಬಳ್ಳಿ. ..................**ಪ್ರತಿವಾದಿಗಳು.**

**ಪೀಠಿಕೆ:**

1. ಶ್ರೀ ಕಾಶಿನಾಥ ಆರ್ ಚಾಟ್ನಿ, ಇವರ ಸ್ಥಾವರ ಸಂಖ್ಯೆ: HT-117 ನೇದ್ದ ಸ್ಥಾವರವು 50 ಕೆ.ವ್ಹಿ.ಎ ವಿದ್ಯುತ್ ಮಂಜೂರಾತಿಯೊಂದಿಗೆ ಹೆಚ್.ಟಿ-2(b) ಜಕಾತಿಯಡಿಯಲ್ಲಿ ಸಂಪರ್ಕಿತಗೊಂಡಿರುತ್ತದೆ. ಸದರ ಸ್ಥಾವರವು ಮಾಪಕವು ನಿದಾನಗತಿಯಲ್ಲಿ ತಿರುಗಿತ್ತಿದೆ ಎಂದು ಹಿಂಬಾಕಿ ಮೊತ್ತ ರೂ. 1,11,974/- ಗಳನ್ನು ಆಕರಿಸಲಾಗಿದ್ದಿರುತ್ತದೆ. ಗ್ರಾಹಕರು ಸ.ಕಾ.ನಿ.ಇಂ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸ್ಕಾಂ, ಹುಬ್ಬಳ್ಳಿರವರು ಜಾರಿ ಮಾಡಿರುವ ಅಂತಿಮ ಆದೇಶಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿ. ಸದರಿ ಸ್ಥಾವರಕ್ಕೆ ವಿಧಿಸಿರುವ ಅಂತಿಮ ಹಿಂಬಾಕಿ ಮೊತ್ತದ ಬಿಲ್‌ನ್ನು ಹಿಂಪಡೆಯಲು ಆದೇಶವನ್ನು ಹೊರಡಿಸಲು ಹಾಗೂ ಸದರಿ ಪ್ರಕರಣವು ಅಂತಿಮಗೊಳ್ಳುವವರೆಗೂ ಸದರಿ ಸ್ಥಾವರದ ವಿದ್ಯುತ್ ಕಡಿತಗೊಳಿಸಬಾರದೆಂದು ವಿನಂತಿಸಿ ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿ,ರವರು ದಿನಾಂಕ:15-02-2021 ರಂದು ವೇದಿಕೆಗೆ ದೂರು ಅರ್ಜಿ ಸಲ್ಲಿಸಿರುತ್ತಾರೆ.
2. ಶ್ರೀ ಕಾಶಿನಾಥ ಆರ್ ಚಾಟ್ನಿ, ಇವರ ಸ್ಥಾವರ ಸಂಖ್ಯೆ: HT-117 ನೇದ್ದ ಸ್ಥಾವರವು 50 ಕೆ.ವ್ಹಿ.ಎ ವಿದ್ಯುತ್ ಮಂಜೂರಾತಿಯೊಂದಿಗೆ ಹೆಚ್.ಟಿ-2(b) ಜಕಾತಿಯಡಿಯಲ್ಲಿ ಸಂಪರ್ಕಿತಗೊಂಡಿದ್ದು, ಸದರಿ ಸ್ಥಾವರದ ಮಾಪಕವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಮಾಪಕ ತಪಾಸಣಾ ಉಪ ವಿಭಾಗ, ಹೆಸ್ಕಾಂ, ಹುಬ್ಬಳ್ಳಿ ರವರು ದಿನಾಂಕ: 23-09-2020 ರಂದು ಪರಿಶೀಲಿಸಿ 'R' ಪೇಸ್ (A1) ನ Current Transformer(CT) ಸ್ಯಾಚುರೇಟ್ ಆದ ಪ್ರಯುಕ್ತ ಮಾಪಕದಲ್ಲಿ 29.518% ಕಡಿಮೆ ಬಳಕೆದಾಖಲಾಗಿರುವ ಬಗ್ಗೆ ಡೌನ್‌ಲೋಡೆಡ್

....2

ದಿನಾಂಕ:18-05-2020 ರಿಂದ 25-09-2020 (4 ತಿಂಗಳು 7 ದಿನಗಳ ಅವಧಿಗೆ) ರವರೆಗೆ ಹಿಂಬಾಕಿ ಮೊತ್ತ ರೂ. 1,11,974/- ಗಳನ್ನು ಆಕರಿಸಿ ಗ್ರಾಹಕರಿಗೆ ತುಂಬುವಂತೆ ದಿನಾಂಕ:12-10-2020 ರಂದು ತಿಳಿಸಿದ್ದಿರುತ್ತದೆ.

3. ಮುಂದುವರೆದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮೊದಲು ನೀಡಿದ ಪ್ರಾವಿಜನಲ್ ಬಿಲ್ ಮೊತ್ತ ರೂ.1,11,974/- ಗಳನ್ನು ಬೇಡಿಕೆ ಆಕರಿಸಲಾಗಿರುವುದು ಸರಿ ಇರುವುದಾಗಿ, ಸದರಿ ಮೊತ್ತವನ್ನು ಪಾವತಿಸುವಂತೆ ದಿನಾಂಕ: 26-03-2021 ರಂದು ಅಂತಿಮ ಆದೇಶವನ್ನು ನೀಡಲಾಗಿದ್ದು, ಸದರಿ ಹಿಂಬಾಕಿಯು ಗ್ರಾಹಕರಿಗೆ ಯಾವುದೇ ದಂಡದ ಮೊತ್ತವಾಗಿರದೇ, ಮಾಪಕವು 29.518% ಕಡಿಮೆ ಬಳಕೆ ದಾಖಲಾಗಿರುವ ಅವಧಿಯು ಲಭ್ಯವಿದ್ದುದರಿಂದ ಬಳಕೆ ದಾಖಲಾಗದೆ ಬಿಟ್ಟುಹೋಗಿದ್ದರಿಂದ, ಸರಾಸರಿ ಲೆಕ್ಕಾಚಾರ ಆಧರಿಸಿದ ವ್ಯತ್ಯಾಸದ ಬಿಲ್ಲುನ್ನು ಕೆ.ಇ.ಆರ್.ಸಿ ನಿಯಮಾವಳಿ ಕಂಡಿಕೆ 29.03 ರ ಪ್ರಕಾರ ಸದರಿ ವ್ಯತ್ಯಾಸದ ಮೊತ್ತವನ್ನು ಗ್ರಾಹಕರು ತುಂಬಲು ಬಾಧ್ಯಸ್ಥರಾಗಿರುತ್ತಾರೆ. ಆದ್ದರಿಂದ ವಿದ್ಯುತ್ ಸ್ಥಾವರ ಸಂಖ್ಯೆ:HT-117 ಗೆ ಈಗಾಗಲೇ ಈ ಕಛೇರಿಯಿಂದ ಹೊರಡಿಸಿರುವ ಅಂತಿಮ ಆದೇಶವನ್ನು ಎತ್ತಿಹಿಡಿದು, ವ್ಯತ್ಯಾಸದ ಬಿಲ್ಲು ರೂ.1,11,974/- ಗಳನ್ನು ತುಂಬುವಂತೆ ಆದೇಶಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುತ್ತದೆ.

4. ಸದರ ಪ್ರಕರಣವನ್ನು ದಿನಾಂಕ:29-03-2021 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

ಗ್ರಾಹಕರ ಪರವಾಗಿ,
ಶ್ರೀ ತುಷಾರ ಎಂ ಬದ್ದಿ

ನಿಗಮದ ಪರವಾಗಿ
ಶ್ರೀ ಡಿ ಎಫ್ ಲಂಗೋಟಿ
ಸ.ಕಾ.ನಿ.ಇಂ(ವಿ)
ಕಾ ಮತು ಪಾ ಶಹರ ಉಪ ವಿಭಾಗ-2, ಹುಬ್ಬಳ್ಳಿ.

**<u>ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿ, ಹುಬ್ಬಳ್ಳಿ ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ ಈ ಕೆಳಗಿನಂತಿರುತ್ತದೆ:</u>**

## PRELIMINARY MEMO OF OBJECTIONS

By Shri Kashinath R Chatni through his Authorised representative Tushar M Baddi R/o Hubballi

### BRIEF FACTS

It is most respectfully submitted that the installation bearing RR No HT-117 standing in the name of Kashinath R Chatni, Hubballi was serviced for Commercial Installation with a sanctioned load of 50KVA under HT-2B tariff, since then the complainant is enjoying the energy supplied to his Commercial installation and regularly paying the energy bills as and when the bills are provided by the licensee.

1. It is further learnt that this Authority has issued a demand note stating that the meter of the installation bearing R R No HT-117 is recording slow i.e. to the tune of 29.518% and on account of this alleged slow recording this Authority has issued a demand note of Rs 111974/-
2. Such being the facts of the case ,this Authority needs to provide us the details as under :
   a. There is no such evidence on record to prove that the "mahazar" was drawn in the terms of clause 42.06(e) nor the matter was referred to the "Third Party Agency" as approved by the Hon'ble Commission.

....3

b. It is learnt that this Authority has issued a demand note of Rs 111974/- considering the report of MRT as alleged on account of slow recording of meter ,which needs to be verified and the same is not admitted until proven.

c. In terms of clause 27.01 of KERC Conditions of Supply is read as under : **27.00 KERC Conditions of Supply ,CORRECTNESS OF METER**

*In the event the Consumer disputes the accuracy of the meter ,he shall give notice to the Licensee, The Licensee shall refer the matter for inspection /testing of the meter to a "Third Party Agency" approved by the Commission under information to the Consumer .The Consumer shall pay the specified testing fee directly to such Agency. The Agency shall test the accuracy of the meter using an electronic type testing equipment with facility of a printer attached to it which shall provide an automatic printout of the test readings ,percentage error with date / time/ R.R.No.,etc. The Agency shall provide printout of test reading, percentage error with date / time /R.R.No.,etc to the Consumer under a copy to the Licensee. Amended versions vide Notification No K.E.R.C./COS/D07/10 DATED :1 . 7 . 2010 published in Karnataka Gazette dated: 22.7.2010*

*Note: Arrangements for inspection /testing of the meter by a "Third Party Agency" is approved by K.E.R.C. appoint*
*ing the Chief Electrical Inspector to Government of Karnataka as Third party Agency vide notification No D/06/6 dated:11.5.2006 and published in the Karnataka Gazette dated:25.5.2006 in accordance with National Electricity Policy dated :12.2.2005.* From above regulation it emerges that the inspecting Authority has not followed the conditions as stipulated above therefore it would be just and proper refer the matter to the Electrical Inspector to Government of Karnataka who has been appointed as "Third Party Agency".

d. It is important to note that in the event of disputed claim in respect of disputed meter, the Assessing Authority namely the Licensee, before passing the order on disputed demand has refer the matter to the Chief Electrical Inspectorate who is the competent authority to look into the defects in the disputed meter and so also to assess the quantum of energy as per the Notification No. K.E.R.C./COS/D/07/10 Dated: 01.07.2010 published in Karnataka Gazette dated: 22. 7. 2010. But on the other hand, the License has failed to refer the matter to the Inspectorate .

e. In this case the license has failed and also shown undue negligence in replacing the alleged faulty energy meter within the prescribed time, which on later date has lead to reflect such huge bills, the license took the matter very casually making mockery of the "Standard of Performance" laid down by the commission.

f. *Duties of the meter Reader as specified by the license:*

...4

Taking Meter Readings and billing at spot , of energy consumption including delivering the bills at spot , maintenance of Meter Reading books and other incidental works thereto including associated clerical work arranging and re-arranging pro forma bills, check working of Meters ,Meters Seals and General condition of installation during routine Meter Reading ,make note in the diary and record in a register regarding defects, deficiencies and unauthorized connections and reconnections etc,etc.Reporting the Section Officer regarding any *abnormalities in the readings,* change in nature of installation ,suspected pilferage of energy etc.noticed during the course of meter readings. Here it is also evident to note that the Meter Reader of the licensee, did visit the premises of the complainant since from the date of service of the above said installations, more specifically during the disputed meter i.e. from May 2020 to September 2020, even if it is presumed that the meter is recording slow the Meter Reader ought to have reported to the concerned Authority regarding *slow recording* wherein his duty mandates him to do so.

g. In terms of clause 27.03 of KERC Conditions of Supply is read as under :**27.03 (i) of KERC Conditions of Supply :**
*when the meter is found to be slow beyond the permissible limits,the Consumer shall be liable to pay the difference at normal rates based on the percentage error,* ***for a period of not more than 6 months prior to the test,*** *due regard being paid to the conditions of working ,occupancy etc., during this period and up to the date of replacement or rectification of the meter.* It is learnt that the licensee/Assessing Officer has quantified the consumption only on the percentage error as recorded by the inspecting Authority wherein the regulation mandates the licensee to note the ***working condition of the installation well.*** Wherein it is important to note that there are several check meters provided to individual consumers where it is noted that there is no such excess energy drawn during the aforesaid period nor before this alleged slow recording nor after the alleged slow recording.

h. It is further submitted that even in the absence of rating report drawn by the HT meter rating staff during the aforesaid period the licensee's qualified engineer shall test the correctness of meter in case of the consumption recorded in a month is less than 50% of the consumption of the previous month, the regulation also mandates the licensee to inspect the meter and reasons of such shortfall shall be recorded in terms of clause 27.02 of Conditions of supply in the absence of such report the demand claimed by the licensee has no *locus standi.*

i. Even assuming but not admitting it is also submitted that in terms of KERC(Electricity Supply) Code,2004 and its amendments (Notified in Karnataka Gazette dated :2.12.2004) it is the duty of the licensee to test the metering equipment and repair or replace the metering equipment within the specified time frame ,the licensee has failed to do so and left to accrue such huge demand.

.....5

j. It is also important to note that ,if at all licensee's meter reader had found such error as alleged (while reading the meter on his monthly visit) which cannot be ignored he could have rectified the error by whatever means it is possible now ;the complainant alone shall not be held responsible for such error .If at all concerned individual had taken positive steps to rectify the error witnessed, then there would not be such huge alleged arrears accumulated so far .Due to the alleged lapses of the respondent individual the installation was allowed to accrue the arrears to the tune of 111974/-during the month of June 2020.

k. It is further requested before this Authority to please be inclined to pass an order to recover the amount of short claim from the concerned respondent individual as it is well establishes fact that the amount accumulated so far is accrued for the negligence & deficiency in service from the part of the concerned licensee. The concerned licensee is personally responsible for the disobedience or delay and not the complainant.

l. Even assuming but not admitting in terms of clause 27.04(vii) of Conditions of Supply in the event delay in rectification of the meter the licensee is liable to pay rebate of 5 % on the monthly energy bills if the delay persists for more than 15 days as under:

   i. If at all the licensee fails to attend the complaint then the licensee is bound to pay the consumer a rebate at the rate of 5% on the monthly energy bills if the delay persists for more than 15 days .In this case it is allegedly learnt that the licensee has replaced the alleged CT on 25.09.2020 i.e. after 127 days.

m. The complainant further wishes to reserve their right to refer the matter to the Electrical Inspectorate as it is the only Authority to ascertain the short claim with respect to faulty/burnt meter in terms of Clause 27 of Conditions of Supply and sub section 6 of Section 26 of the Electricity Act 1910.This Authority may please note that the licensee is bound by those provisions of the erstwhile Indian Electricity Act 2003, particularly in the context of Electricity Meters.

n. The Assessing officer sitting as Supervisory/Appellate Authority is prayed to take the aforesaid facts into consideration and not by cryptic and non-speaking orders by simply terming it as claim charges which will cover up the illegal acts of the Individual Licensee by shifting burden on the Consumer, which is wholly illegal and unsustainable under law.

Therefore in view of the above it is hereby requested to kindly consider the report of HTMR as devoid of facts and it is also requested to kindly give us an opportunity of personal hearing in this regard so as to ascertain the facts of the case in the interest of justice

This is for your kind information and further needful.

.....6

## ನಿಗಮದ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಶಹರ ಉಪ ವಿಭಾಗ-2, ಹೆಸ್ಕಾಂ, ಹುಬ್ಬಳ್ಳಿ ಇವರ ಲಿಖಿತ ಹೇಳಿಕೆ:

ನಾನು ಶ್ರೀ.ಡಿ.ಎಫ್.ಲಂಗೋಟಿ, ಸಹಾಯಕ ಕಾರ್ಯನಿರ್ವಾಹಕ ಇಂಜನೀಯರು(ವಿ) ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-2 ಹೆಸ್ಕಾಂ ಹುಬ್ಬಳ್ಳಿಯಲ್ಲಿ ದಿನಾಂಕ: 10-09-2018 ರಿಂದ ಕೆಲಸ ನಿರ್ವಹಿಸುತ್ತಿದ್ದು, ಸ್ಥಾವರ ಸಂಖ್ಯೆ HT117/Acc ID-5122642000 ಶ್ರೀ.ಕಾಶಿನಾಥ ಆರ್ ಚಾಟ್ನಿ ರವರಿಗೆ ಸಂಬಂಧಿಸಿದಂತೆ ದಾಖಲೆಗಳ ಆಧಾರದ ಮೇಲೆ ನೀಡುವ ಹೇಳಿಕೆ ಏನೆಂದರೆ,

1) ವಿದ್ಯುತ್ ಸ್ಥಾವರ ಸಂಖ್ಯೆ: HT117 ರ ನೋಂದಾಯಿತ ವಿದ್ಯುತ್ ಗ್ರಾಹಕರ ಹೆಸರು ಶ್ರೀ. ಕಾಶಿನಾಥ ಆರ್ ಚಾಟ್ನಿ ಇದ್ದು, ಹೆಚ್.ಟಿ-2(b) ಜಕಾತಿಯಲ್ಲಿ 50 ಕೆ.ವ್ಹಿ.ಎ ಭಾರಕ್ಕೆ ಮಂಜೂರಾತಿ ಹೊಂದಿರುತ್ತದೆ.
2) ವಿದ್ಯುತ್ ಸ್ಥಾವರ ಸಂಖ್ಯೆ: HT117 ರ ಮಾಪಕವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಮಾಪಕ ತಪಾಸಣಾ, ಹೆಚ್.ಟಿ ರೇಟಿಂಗ್ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿ ರವರು ದಿನಾಂಕ: 23-09-2020 ರಂದು ಪರಿಶೀಲಿಸಿ ನೀಡಿದ ಡೌನ್‌ಲೋಡೆಡ್ ಡಾಟಾದನ್ವಯ Condition of Supply of Electricity of Distribution Licensees in the state of Karnataka ರ ರೆಗುಲೇಷನ್ 27.03 ರ ಪ್ರಕಾರ ಗರಿಷ್ಟ 6 ತಿಂಗಳಿಗೆ ಹಿಂಬಾಕಿ ಆಕರಣೆ ಮಾಡಬೇಕಾಗಿದ್ದು, ಡೌನ್‌ಲೋಡೆಡ್ ಡಾಟಾದಲ್ಲಿ ಮಾಪಕವು ನಿಧಾನಗತಿಯಲ್ಲಿರುವ ಅವಧಿಯು ಲಭ್ಯವಿದ್ದುದರಿಂದ ದಿನಾಂಕ:18-05-2020 ರಿಂದ 25-09-2020 (4 ತಿಂಗಳು 7 ದಿನಗಳ ಅವಧಿಗೆ) ರವರೆಗೆ ಹಿಂಬಾಕಿ ಮೊತ್ತ ರೂ. 1,11,974/- ಗಳನ್ನು ಆಕರಿಸಿ ಗ್ರಾಹಕರಿಗೆ ತುಂಬುವಂತೆ ದಿನಾಂಕ:12-10-2020 ರಂದು ತಿಳಿಸಿರುವುದು ಸರಿ ಇರುತ್ತದೆ.
3) ಕೆ.ಇ.ಆರ್.ಸಿ ಕಂಡಿಕೆ 42.06(e) ವಿದ್ಯುತ್ ಕಳ್ಳತನದ ಸಂದರ್ಭದಲ್ಲಿ ಮಹಜರ್ ಮಾಡುಬೇಕೆಂದು ತಿಳಿಸುತ್ತದೆ. ಆದರೆ ಸದರಿ ಪ್ರಕರಣವು ವಿದ್ಯುತ್ ಕಳ್ಳತನಕ್ಕೆ ಸಂಬಂಧಿಸಿದ್ದಾಗಿರದೆ ಮಾಪಕದ ನಿಧಾನಗತಿಯ ದಾಖಲೆಗೆ ಸಂಬಂಧಿಸಿರುವುದು ಆಗಿರುವುದರಿಂದ 42.06(e) ಕಂಡಿಕೆ ಅನ್ವಯಿಸುವುದಿಲ್ಲಾ. ಆದಾಗಿಯೂ ಸಹಾಯಕ ಕಾರ್ಯನಿರ್ವಾಹಕ ಇಂಜೀನಿಯರ(ವಿ), ಮಾಪಕ ತಪಾಸಣಾ ಹೆಚ್.ಟಿ ರೇಟಿಂಗ್, ವಿಭಾಗ-1 ರವರು ಸ್ಥಾವರವನ್ನು ಶಾಖಾಧಿಕಾರಿಗಳು ಹಾಗೂ ಬಳಕೆದಾರರ ಸಮ್ಮುಖದಲ್ಲಿ ಪರಿಶೀಲಿಸಿ ವರದಿಯ ಮೇಲೆ ಸದರಿಯವರ ಸಹಿ ಪಡೆದು ವರದಿಯ ಗ್ರಾಹಕರ ಪ್ರತಿಯನ್ನು ಬಳಕೆದಾರರಿಗೆ ನೀಡಲಾಗಿರುತ್ತದೆ.
4) ಕೆ.ಇ.ಆರ್.ಸಿ ಕಂಡಿಕೆ 27.03(4) ರ ಪ್ರಕಾರ ಗ್ರಾಹಕರು ಅಥವಾ ಗ್ರಾಹಕರ ಪ್ರತಿನಿಧಿರವರು ಸ್ಥಾವರದ ಮಾಪಕ ತಪಾಸಣಾ ವರದಿಯ ಮೇಲೆ ಸಹಿ ಮಾಡಲು ನಿರಾಕರಿಸಿದಾಗ, ಮಾಪಕದ ದೋಷವನ್ನು ಸರಿಪಡಿಸುವುದಾಗಲೀ ಅಥವಾ ಮಾಪವನ್ನು ಬದಲಾಯಿಸುವುದಾಗಲೀ ಮಾಡದೇ "Third Party Agency" ರವರಿಗೆ ಮಾಪವನ್ನು ಸ್ಥಳದಲ್ಲಿಯೇ ಪರಿಶೀಲಿಸಲು ಕೋರಬೇಕಾಗಿರುತ್ತದೆ. ಸದರಿ ಸ್ಥಾವರದ ಮಾಪವನ್ನು ಬಳಕೆದಾರರ ಸಮ್ಮುಖದಲ್ಲಿಯೇ ಪರಿಶೀಲಿಸಿ, ಮಾಪಕ ತಪಾಸಣಾ ವರದಿಯ ಮೇಲೆ ಬಳಕೆದಾರರ ಸಹಿಯನ್ನು ಪಡೆದುಕೊಂಡು, ಅದರ ಒಂದು ಪ್ರತಿಯನ್ನು ಬಳಕೆದಾರರಿಗೆ ನೀಡಲಾಗಿರುತ್ತದೆಯಾದ್ದರಿಂದ, "Third Party Agency" ರವರಿಗೆ ಮಾಪಕ ತಪಾಸಣೆಗಾಗಿ ಕೋರುವ ಅವಶ್ಯ ಇರುವುದಿಲ್ಲ.
5) ಸ್ಥಾವರದ ಮಾಪಕವನ್ನು ದಿನಾಂಕ: 23-09-2020 ರಂದು ಪರಿಶೀಲಿಸಿ, ಮಾಪಕವು ದೋಷಪೂರಿತವಾಗಿರುವುದಾಗಿ ವರದಿ ಸಲ್ಲಿಸಿದರನ್ವಯ, ದಿನಾಂಕ:25-09-2020 ರಂದು ದೋಷಪೂರಿತ ಮಾಪಕವನ್ನು ಉತ್ತಮ ಮಾಪಕದೊಂದಿಗೆ ಬದಲಾಯಿಸಲಾಗಿರುತ್ತದೆ. ದೋಷಪೂರಿತ ಮಾಪಕವನ್ನು ಬದಲಾಯಿಸುವಲ್ಲಿ ಲೆಸೆನ್ಸಿಯು ನಿಷ್ಕಾಳಜಿ ಮಾಡಿರುವುದರಿಂದಾಗಿ ಹೆಚ್ಚಿನ ಮೊತ್ತದ ಹಿಂಬಾಕಿ ಆಕರಣೆಯಾಗಲು ಕಾರಣವಾಗಿರುವುದಾಗಿ ಹಾಗೂ ಸದರಿ ವಿಷಯವನ್ನು ಹಗುರವಾಗಿ ತೆಗೆದುಕೊಂಡಿರುವುದಾಗಿ ಆಕ್ಷೇಪಿಸಿರುವುದು ಸತ್ಯಕ್ಕೆ ದೂರವಾಗಿರುತ್ತದೆ.

....7

6) ಕೆ.ಇ.ಆರ್.ಸಿ ನಿಯಮಾವಳಿಗಳನ್ವಯ ಲೈಸೆನ್ಸಿಯ ಇಂಜಿನೀಯರ್ ನಿಯತಕಾಲಿಕ ಮಾಪಕ ತಪಾಸಣೆ ಮಾಡಿ, ಸ್ಥಾವರವು 29.52% ರಷ್ಟು ನಿಧಾನಗತಿಯಲ್ಲಿ ತಿರುಗುತ್ತಿರುವುದಾಗಿ ವರದಿ ಸಲ್ಲಿಸಿದರನ್ವಯ ಹಿಂಬಾಕಿ ಆಕರಿಸಿರುವುದು ಸರಿಯಾಗಿರುತ್ತದೆ. ಆದರೆ ಗ್ರಾಹಕರ ಪ್ರತಿನಿಧಿಯವರು ಆಕ್ಷೇಪಿಸಿದಂತೆ ಕೆ.ಇ.ಆರ್.ಸಿ.ಕಂಡಿಕೆ 27.02 ರ ಪ್ರಕಾರ ಸ್ಥಾವರದ ಬಳಕೆ ಶೇ.50% ಕ್ಕಿಂತ ಕಡಿಮೆ ದಾಖಲಾದಲ್ಲಿ ಲೈಸೆನ್ಸಿಯ ಇಂಜಿನೀಯರ್ ನಿಯತಕಾಲಿಕ ಮಾಪಕ ತಪಾಸಣೆ ಮಾಡಿ ಕಡಿಮೆ ಬಳಕೆಗೆ ಕಾರಣವನ್ನು ದಾಖಲಿಸಿ ವರದಿ ನೀಡಬೇಕಾಗಿರುತ್ತದೆ. ಇಲ್ಲವಾದಲ್ಲಿ ಅಂತಹ ಹಿಂಬಾಕಿ ಆಕರಣೆ ಮಾಡಲು ಲೈಸೆನ್ಸಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದು ಸದರಿ ಪ್ರಕರಣದಲ್ಲಿ ಅನ್ವಯಿಸುವುದಿಲ್ಲ.

7) ಸ್ಥಾವರದ ಮಾಪಕವನ್ನು ದಿನಾಂಕ:23-09-2020 ರಂದು ಪರಿಶೀಲಿಸಿ, ಮಾಪಕವು ದೋಷಪೂರಿತವಾಗಿರುವುದಾಗಿ ವರದಿ ಸಲ್ಲಿಸಿದರನ್ವಯ, ದಿನಾಂಕ:25-09-2020 ರಂದು ದೋಷಪೂರಿತ ಮಾಪಕವನ್ನು ಉತ್ತಮ ಮಾಪಕದೊಂದಿಗೆ ಬದಲಾಯಿಸಲಾಗಿದ್ದು, ಕೆ.ಇ.ಆರ್.ಸಿ ಕಂಡಿಕೆ 27.04(7) ರ ಪ್ರಕಾರ ಮಾಪಕದಲ್ಲಿ ಬಳಕೆ ದಾಖಲಾಗದಿದ್ದಲ್ಲಿ, ಮಾಪಕ ತಪಾಸಣಾ ವರದಿ ದಿನಾಂಕದಿಂದ 15 ದಿನಗಳೊಳಗಾಗಿ ಸದರಿ ಮಾಪಕವನ್ನು ಉತ್ತಮ ಮಾಪಕದೊಂದಿಗೆ ಬದಲಾಯಿಸಬೇಕಾಗಿರುತ್ತದೆ. ಇಲ್ಲವಾದಲ್ಲಿ ಮಾಸಿಕ ಬಿಲ್ಲಿನಲ್ಲಿ ಶೇ.5% ರಷ್ಟು ರಿಯಾಯಿತಿಯನ್ನು ನೀಡಬೇಕಾಗಿರುತ್ತದೆ. ಸದರಿ ಪ್ರಕರಣದಲ್ಲಿ ನಿಧಾನಗತಿಯಲ್ಲಿ ತಿರುಗುತ್ತಿರುವ ಮಾಪಕವನ್ನು ಉತ್ತಮ ಮಾಪಕದೊಂದಿಗೆ ತಪಾಸಣಾ ವರದಿ ದಿನಾಂಕದಿಂದ 3 ದಿನಗಳೊಳಗಾಗಿ ಬದಲಾಯಿಸಲಾಗಿದ್ದು, ಶೇ.5% ರಷ್ಟು ರಿಯಾಯಿತಿ ನೀಡಬೇಕೆನ್ನುವುದು ಅನ್ವಯಿಸುವುದಿಲ್ಲಾ.

8) ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮೊದಲು ನೀಡಿದ ಪ್ರಾವಿಜನಲ್ ಬಿಲ್ ಮೊತ್ತ ರೂ.1,11,974/- ಗಳನ್ನು ಬೇಡಿಕೆ ಆಕರಿಸಲಾಗಿರುವುದು ಸರಿ ಇರುವುದಾಗಿ, ಸದರಿ ಮೊತ್ತವನ್ನು ಪಾವತಿಸುವಂತೆ ದಿನಾಂಕ: 26-03-2021 ರಂದು ಅಂತಿಮ ಆದೇಶವನ್ನು ಹೊರಡಿಸಲಾಗಿರುತ್ತದೆ.

## ಪ್ರಾರ್ಥನೆ

**ದಯಾಪರರವರಲ್ಲಿ ಪ್ರಾರ್ಥಿಸುವುದೇನೆಂದರೆ ಸದರಿ ಹಿಂಬಾಕಿಯು ಗ್ರಾಹಕರಿಗೆ ಯಾವುದೇ ದಂಡದ ಮೊತ್ತವಾಗಿರದೇ, ಮಾಪಕವು ದೋಷಪೂರಿತವಾಗಿದ್ದು, ಕಡಿಮೆ ಬಳಕೆ ದಾಖಲಾಗಿದ್ದರಿಂದ, ಡೌನ್‌ಲೋಡೆಡ್ ಡಾಟಾ ಆಧರಿಸಿದ ವ್ಯತ್ಯಾಸದ ಬಿಲ್ಲು ಇರುವುದರಿಂದ ಕೆ.ಇ.ಆರ್.ಸಿ ನಿಯಮಾವಳಿ ಕಂಡಿಕೆ 29.03 ರ ಪ್ರಕಾರ ಸದರಿ ವ್ಯತ್ಯಾಸದ ಮೊತ್ತವನ್ನು ಗ್ರಾಹಕರು ತುಂಬಲು ಬಾಧ್ಯಸ್ಥರಿರುತ್ತಾರೆ. ಆದ್ದರಿಂದ ವಿದ್ಯುತ್ ಸ್ಥಾವರ ಸಂಖ್ಯೆ HT117/Acc ID-5122642000 ಗೆ ಈಗಾಗಲೇ ಈ ಕಛೇರಿಯಿಂದ ಹೊರಡಿಸಿರುವ ಅಂತಿಮ ಆದೇಶವನ್ನು ಎತ್ತಿಹಿಡಿದು, ವ್ಯತ್ಯಾಸದ ಬಿಲ್ಲು ರೂ.1,11,974/- ಗಳನ್ನು ತುಂಬುವಂತೆ ಆದೇಶಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.**

....8

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಶ್ರೀ ಕಾಶಿನಾಥ ಆರ್ ಚಾಟ್ನಿ, ಇವರ ಸ್ಥಾವರ ಸಂಖ್ಯೆ: HT-117 ನೇದ್ದ ಸ್ಥಾವರವು 50 ಕೆ.ವ್ಹಿ.ಎ ವಿದ್ಯುತ್ ಮಂಜೂರಾತಿಯೊಂದಿಗೆ ಹೆಚ್.ಟಿ-2(b) ಜಕಾತಿಯಡಿಯಲ್ಲಿ ಸಂಪರ್ಕಿತಗೊಂಡಿರುತ್ತದೆ. ಸದರ ಸ್ಥಾವರದ ಮಾಪಕವು ನಿದಾನಗತಿಯಲ್ಲಿ ತಿರುಗಿತ್ತಿದೆ ಎಂದು ಹಿಂಬಾಕಿ ಮೊತ್ತ ರೂ. 1,11,974/- ಗಳನ್ನು ಆಕರಿಸಲಾಗಿದ್ದಿರುತ್ತದೆ. ಗ್ರಾಹಕರು ಸ.ಕಾ.ನಿ.ಇಂ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸ್ಕಾಂ, ಹುಬ್ಬಳ್ಳಿರವರು ಜಾರಿ ಮಾಡಿರುವ ಅಂತಿಮ ಆದೇಶಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿ. ಸದರಿ ಸ್ಥಾವರಕ್ಕೆ ವಿಧಿಸಿರುವ ಅಂತಿಮ ಹಿಂಬಾಕಿ ಮೊತ್ತದ ಬಿಲ್‌ನ್ನು ಹಿಂಪಡೆಯಲು ಆದೇಶವನ್ನು ಹೊರಡಿಸಲು ಹಾಗೂ ಸದರಿ ಪ್ರಕರಣವು ಅಂತಿಮಗೊಳ್ಳುವವರೆಗೂ ಸದರಿ ಸ್ಥಾವರದ ವಿದ್ಯುತ್ ಕಡಿತಗೊಳಿಸಬಾರದೆಂದು ವಿನಂತಿಸಿ ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿ,ರವರು ದಿನಾಂಕ:15-02-2021 ರಂದು ವೇದಿಕೆಗೆ ದೂರು ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ.
2. ಶ್ರೀ ಕಾಶಿನಾಥ ಆರ್ ಚಾಟ್ನಿ, ಇವರ ಸ್ಥಾವರ ಸಂಖ್ಯೆ: HT-117 ನೇದ್ದ ಸ್ಥಾವರವು 50 ಕೆ.ವ್ಹಿ.ಎ ವಿದ್ಯುತ್ ಮಂಜೂರಾತಿಯೊಂದಿಗೆ ಹೆಚ್.ಟಿ-2(b) ಜಕಾತಿಯಡಿಯಲ್ಲಿ ಸಂಪರ್ಕಿತಗೊಂಡಿದ್ದು, ಸದರಿ ಸ್ಥಾವರದ ಮಾಪಕವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಮಾಪಕ ತಪಾಸಣಾ ಉಪ ವಿಭಾಗ, ಹೆಸ್ಕಾಂ, ಹುಬ್ಬಳ್ಳಿ ರವರು ದಿನಾಂಕ: 23-09-2020 ರಂದು ಪರಿಶೀಲಿಸಿದಾಗ, 'R' ಪೇಸ್ (A1) ನ Current Transformer(CT) ಸ್ಯಾಚುರೇಟ್ ಆದ ಪ್ರಯುಕ್ತ ಮಾಪಕದಲ್ಲಿ 29.518% ಕಡಿಮೆ ಬಳಕೆ ದಾಖಲಾಗಿರುವ ಬಗ್ಗೆ ಡೌನ್‌ಲೋಡೆಡ್ ಡಾಟಾ ಆಧರಿಸಿ ನೀಡಿರುವ ವರದಿಯಂತೆ Condition of Supply of Electricity of Distribution Licensees in the state of Karnataka ರ ರೆಗುಲೇಷನ್ 27.03 ರ ಪ್ರಕಾರ ಹಿಂಬಾಕಿ ಆಕರಣೆ ಮಾಡಬೇಕಾಗಿದ್ದು, ಸದರಿ ವರದಿಯಂತೆ ಮಾಪಕದಲ್ಲಿ 29.518% ಕಡಿಮೆ ಬಳಕೆ ದಾಖಲಾಗಿರುವ ಅವಧಿಯು ಲಭ್ಯವಿದ್ದುದರಿಂದ ದಿನಾಂಕ:18-05-2020 ರಿಂದ 25-09-2020 (4 ತಿಂಗಳು 7 ದಿನಗಳ ಅವಧಿಗೆ) ರವರೆಗೆ ಹಿಂಬಾಕಿ ಮೊತ್ತ ರೂ. 1,11,974/- ಗಳನ್ನು ಆಕರಿಸಿ ಗ್ರಾಹಕರಿಗೆ ತುಂಬುವಂತೆ ದಿನಾಂಕ:12-10-2020 ರಂದು ತಿಳಿಸಿರುವುದು ಕಂಡು ಬರುತ್ತದೆ.
3. ಮುಂದುವರೆದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮೊದಲು ನೀಡಿದ ಪ್ರಾವಿಜನಲ್ ಬಿಲ್ ಮೊತ್ತ ರೂ.1,11,974/- ಗಳನ್ನು ಬೇಡಿಕೆ ಆಕರಿಸಲಾಗಿರುವುದು ಸರಿ ಇರುವುದಾಗಿ, ಸದರಿ ಮೊತ್ತವನ್ನು ಪಾವತಿಸುವಂತೆ ದಿನಾಂಕ:26-03-2021 ರಂದು ಅಂತಿಮ ಆದೇಶವನ್ನು ನೀಡಲಾಗಿದ್ದು, ಸದರಿ ಹಿಂಬಾಕಿಯು ಗ್ರಾಹಕರಿಗೆ ಯಾವುದೇ ದಂಡದ ಮೊತ್ತವಾಗಿರದೇ, ಮಾಪಕವು 29.518% ಕಡಿಮೆ ಬಳಕೆ ದಾಖಲಾಗಿರುವ ಅವಧಿಯು ಲಭ್ಯವಿದ್ದುದರಿಂದ ಬಳಕೆ ದಾಖಲಾಗದೆ ಬಿಟ್ಟುಹೋಗಿದ್ದರಿಂದ, ಸರಾಸರಿ ಲೆಕ್ಕಾಚಾರ ಆಧರಿಸಿದ ವ್ಯತ್ಯಾಸದ ಬಿಲ್ಲನ್ನು ಕೆ.ಇ.ಆರ್.ಸಿ ನಿಯಮಾವಳಿ ಕಂಡಿಕೆ 29.03 ರ ಪ್ರಕಾರ ಸದರಿ ವ್ಯತ್ಯಾಸದ ಮೊತ್ತವನ್ನು ಗ್ರಾಹಕರು ತುಂಬಲು ಬಾಧ್ಯಸ್ಥರಾಗಿರುತ್ತಾರೆ. ಆದ್ದರಿಂದ ವಿದ್ಯುತ್ ಸ್ಥಾವರ ಸಂಖ್ಯೆ:HT-117 ಗೆ ಈಗಾಗಲೇ ಈ ಕಛೇರಿಯಿಂದ ಹೊರಡಿಸಿರುವ ಅಂತಿಮ ಆದೇಶವನ್ನು ಎತ್ತಿಹಿಡಿದು, ವ್ಯತ್ಯಾಸದ ಬಿಲ್ಲು ರೂ.1,11,974/- ಗಳನ್ನು ತುಂಬುವಂತೆ ಆದೇಶಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.
4. ಈ ಪ್ರಕರಣದಲ್ಲಿ KERC Cos ಕಂಡಿಕೆ. 27.00 ಅನ್ವಯಿಸುವುದಿಲ್ಲ. ಈ ಪ್ರಕರಣದಲ್ಲಿ ಮಾಪಕವು ಸರಿ ಇದ್ದು, 'R' ಪೇಸ್ (A1) ನ Current Transformer(CT) ಸ್ಯಾಚುರೇಟ್ ಆದ ಪ್ರಯುಕ್ತ ಮಾಪಕದಲ್ಲಿ 100% ರಷ್ಟು ಬಳಕೆ ದಾಖಲಾಗಿರುವುದಿಲ್ಲ. ಕಾರಣ KERC Cos ಕಂಡಿಕೆ 27.00 ಈ ಪ್ರಕರಣದಲ್ಲಿ ಅನ್ವಯಿಸುವುದಿಲ್ಲ. ಸದರಿ ಸ್ಥಾವರದ ಮೀಟರ್ ಕ್ಯೂಬಿಕಲ್‌ನ್ನು ದಿನಾಂಕ:25-09-2020 ಬದಲಾಯಿಸಿರುತ್ತಾರೆ. ಆದ್ದರಿಂದ KERC Cos ಕಂಡಿಕೆ 27.04 (vii) ರಂತೆ 5% ರಿಯಾಯಿತಿ ಅನ್ವಯವಾಗುವುದಿಲ್ಲ. ಮಾಪಕವು ಸರಿ ಇದ್ದ ಪ್ರಯುಕ್ತ ಹೆಸ್ಕಾಂ, ಮಾಪಕದ ದೋಷದ ಕುರಿತು ಈ ಮಾಪಕವನ್ನು ಮೂರನೇಯ ವ್ಯಕ್ತಿಯ ತಪಾಸಣೆಗೆ ಒಳಪಡಿಸುವ ಅವಶ್ಯಕತೆ ಇರುವುದಿಲ್ಲ.

....9

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, ಸದರಿ ಪ್ರಕರಣದಲ್ಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಮಾಪಕ ತಪಾಸಣಾ ಉಪ ವಿಭಾಗ, ಹೆಸ್ಕಾಂ, ಹುಬ್ಬಳ್ಳಿ ರವರು ದಿನಾಂಕ: 23-09-2020 ರಂದು ಪರಿಶೀಲಿಸಿ 'R' ಫೇಸ್ (A1) ನ Current Transformer(CT) ಸ್ಯಾಚುರೇಟ್ ಆದ ಪ್ರಯುಕ್ತ ಮಾಪಕದಲ್ಲಿ 29.518% ಕಡಿಮೆ ಬಳಕೆ ದಾಖಲಾಗಿರುವ ಬಗ್ಗೆ ಡೌನ್‌ಲೋಡೆಡ್ ಡಾಟಾ ಆಧರಿಸಿ ನೀಡಿರುವ ವರದಿಯಂತೆ Condition of Supply of Electricity of Distribution Licensees in the state of Karnataka ರ ರೆಗುಲೇಷನ್ 27.03 ರ ಪ್ರಕಾರ ಹಿಂಬಾಕಿ ಆಕರಣೆ ಮಾಡಬೇಕಾಗಿದ್ದು, ಮಾಪಕವು 29.518% ಕಡಿಮೆ ಬಳಕೆ ದಾಖಲಾಗಿರುವ ಅವಧಿಯು ಲಭ್ಯವಿದ್ದುದರಿಂದ ಬಳಕೆ ದಾಖಲಾಗದೆ ಬಿಟ್ಟುಹೋಗಿದ್ದರಿಂದ ದಿನಾಂಕ:18-05-2020 ರಿಂದ 25-09-2020 ರವರೆಗೆ (4 ತಿಂಗಳು 7 ದಿನಗಳ ಅವಧಿಗೆ) ಹಿಂಬಾಕಿ ಮೊತ್ತ ರೂ. 1,11,974/-ಗಳನ್ನು ಸ.ಕಾ.ನಿ.ಇಂ(ವಿ) ಕಾ ಮತ್ತು ಪಾ ಶಹರ ಉಪವಿಭಾಗ-2, ಹೆಸ್ಕಾಂ, ಹುಬ್ಬಳ್ಳಿರವರು ಬಿಲ್ ವಿತರಿಸಿರಿಸಿರುವುದು ನಿಗಮದ ನಿಯಮಾನುಸಾರ ಸರಿ ಇದ್ದು, ಗ್ರಾಹಕರು ರೂ. 1,11,974/-ಗಳ ಹಿಂಬಾಕಿ ಬಿಲ್‌ನ್ನು ನಿಗಮಕ್ಕೆ ಪಾವತಿಸಲು ಬಾಧ್ಯಸ್ಥರಾಗಿರುತ್ತಾರೆ. ಆದ್ದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-255/2021/CYS-13 ದಿನಾಂಕ: - 7 APR 2021**

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ.16.07.2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/19-20/ಸಿವೈಎಸ್-5493 ದಿ.12.03.2020 ಮತ್ತು ಹೆಸ್ಕಾಂ/ಜಿಎಂ(ಟಿ)/ಇಇ(ಆರ್.ಎ)/ಎಓ/20-21/ಸಿವೈಎಸ್-4283 ದಿ:13-01-2021 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ***ಗ್ರಾಹಕರ ಮನವಿಯನ್ನು ಪುರಸ್ಕರಿಸಲಾಗಿಲ್ಲ.***
2. ***ಲೈಸನ್ಸುದಾರರು ಗ್ರಾಹಕರಿಗೆ ಆಕರಿಸಿರುವ ಮೊತ್ತವನ್ನು ನಿಯಮಾನುಸಾರ ಪಾವತಿಸಿಕೊಳ್ಳುವ ಕ್ರಮ ಜರುಗಿಸುವುದು.***

| (ರಮೇಶ ಟಿ) 7/4 | (ಲೀಲಾ ಆರ್ ಹಿರೇಮಠ) 7-4-21 | (ಎಮ್. ಆರ್. ಶಾನಭಾಗ) 7.4.21 |
|---|---|---|
| ಕಾರ್ಯನಿರ್ವಾಹಕ ಇಂಜಿನೀಯರ(ವಿ)<br>ಕಾ ಮತ್ತು ಪಾ ಗ್ರಾಮೀಣ ವಿಭಾಗ<br>ಹೆಸ್ಕಾಂ, ಧಾರವಾಡ<br>ಹಾಗೂ ಸದಸ್ಯರು ಧಾರವಾಡ ಜಿಲ್ಲೆ<br>ಗ್ರಾ.ಕುಂ.ಕೊ.ನಿ.ವೇದಿಕೆ. | ಆಯೋಗದಿಂದ ನಿಯೋಜಿಸಲಾದ<br>ಸದಸ್ಯರು. | ಅಧೀಕ್ಷಕ ಇಂಜಿನೀಯರ(ವಿ)<br>ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ<br>ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ<br>ಗ್ರಾ.ಕುಂ.ಕೊ.ನಿ.ವೇದಿಕೆ. |

ಗೆ,

**"ನೊಂದಾಯಿತ ಅಂಚೆ ಮೂಲಕ"**

ಶ್ರೀ ಕಾಶಿನಾಥ ಆರ್ ಚಾಟ್ನಿ,
CTS No. 2403/A, ಲಕ್ಷ್ಮೀ ಬಾಲಕೃಷ್ಣ ಸ್ಕ್ವೊಯರ್,
ಸ್ಟೇಷನ್ ರೋಡ, ಹುಬ್ಬಳ್ಳಿ
(R R No : HT-117)
C/o ಶ್ರೀ ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ, ಕೇಶ್ವಾಪೂರ ಹುಬ್ಬಳ್ಳಿ-58023.
ಮೋಬೈಲ್ ನಂ: 9900197904
ಇ-ಮೇಲ್ ಐ.ಡಿ: tusharbaddi@gmail.com

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ.

....10